ಕೂಡ ವಿಪರೀತವಾಗಿತ್ತು. ದೀಪಗೃಹದ ಜೀವನ ಎಲ್ಲಿಲ್ಲದಷ್ಟು ಕಠಿಣವಾಗಿತ್ತು. ದಕ್ಷಿಣದ ಕಡೆಯಿಂದ ಬರುವ ಆಲಸಿ ಹಾಗೂ ವಿಲಾಸಿ ಜನರಿಗೆ ಈ ಕೆಲಸ ಹಿಡಿಸುವಂಥದ್ದಾಗಿರಲಿಲ್ಲ. ಆ ದೀಪಗೃಹದ ಸಂಚಾಲಕನಿಗೆ ಅದೊಂದು ಸೆರೆಮನೆಯೇ ಸರಿ. ರವಿವಾರವೊಂದನ್ನು ಹೊರತುಪಡಿಸಿದರೆ, ಬರೀ ಬಂಡೆಗಲ್ಲುಗಳಿಂದ ತುಂಬಿದ ಆ ದ್ವೀಪವನ್ನು ಬಿಟ್ಟು ಆತ ಕದಲುವಂತಿರಲಿಲ್ಲ. ಆ್ಯಸ್ಪಿನ್‌ವಾಲ್‌ದಿಂದ ಪ್ರತಿದಿನ ಒಂದು ಸಲ ಮಾತ್ರ ಬರುವ ದೋಣಿಯೊಂದು ಆತನಿಗೆ ಆಹಾರ, ನೀರು, ಮುಂತಾದ ಅಗತ್ಯ ವಸ್ತುಗಳನ್ನು ಹೊತ್ತು ತಂದು, ತಕ್ಷಣವೇ ವಾಪಸಾಗುತ್ತಿತ್ತು. ಒಂದು ಎಕರೆ ಕ್ಷೇತ್ರದ ಇಡೀ ದ್ವೀಪದಲ್ಲಿ ಒಬ್ಬನೇ ಒಬ್ಬ ವ್ಯಕ್ತಿ ಕೂಡ ನೆಲೆಸಿರಲಿಲ್ಲ. ಸಂಚಾಲಕನಾದವನು ಆ ದೀಪಗೃಹದಲ್ಲಿದ್ದುಕೊಂಡು ಅದನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು. ಹಗಲು ಹೊತ್ತಿನಲ್ಲಿ ಬೇರೆ ಬೇರೆ ಬಣ್ಣದ ಧ್ವಜಗಳನ್ನು ಬೀಸುತ್ತ, ವಾಯುಭಾರಮಾಪಕದಲ್ಲುಂಟಾದ ಬದಲಾವಣೆಗಳನ್ನು ಸೂಚಿಸಬೇಕು. ಸಂಜೆ ಹೊತ್ತಿನಲ್ಲಿ ಆತ ಲಾಟೀನು ಹೊತ್ತಿಸಬೇಕು. ತುಂಬ ಕಡಿದಾಗಿದ್ದ, ಎತ್ತರವಾಗಿದ್ದ ನಾಲ್ಕು ನೂರು ಪಾವಟಿಗೆಗಳನ್ನು ಏರಿ ದೀಪಗೃಹದ ತುತ್ತ ತುದಿಯ ಮೇಲಿರುವ ಲಾಟೀನು ಹೊತ್ತಿಸುವುದು ಪರಿಶ್ರಮದ ಕೆಲಸವೇ ಆಗಿತ್ತು. ಕೆಲವೊಮ್ಮೆ ಹಗಲು ಹೊತ್ತಿನಲ್ಲಿ ಕೂಡ ಅನೇಕ ಬಾರಿ ಈ ಮೆಟ್ಟಲುಗಳನ್ನು ಏರಿಳಿಯುವ ಕೆಲಸ ಮಾಡಲೇಬೇಕಾಗುತ್ತದೆ. ಒಟ್ಟಿನಲ್ಲಿ ಅದೊಂದು ಬಗೆಯ ಸನ್ಯಾಸಿ ಜೀವನ. ಅದಕ್ಕೂ ಮಿಗಿಲಾಗಿ ಅದೊಂದು ಏಕಾಂಗಿ ಜೀವನ. ಆದ್ದರಿಂದ ಈ ದೀಪಗೃಹಕ್ಕೆ ಓರ್ವ ಕಾಯಂ ಸಂಚಾಲಕನನ್ನು ಎಲ್ಲಿಂದ ಹುಡುಕಿ ತರುವುದು ಎಂದೆಲ್ಲ ಐಸಾಕ್ ಫಾಲ್ಕನ್‌ಬ್ರಿಡ್ಜ್ ತುಂಬ ಚಿಂತಿತನಾಗಿದ್ದ ಎಂಬುದನ್ನು ಸಹಜವಾಗಿಯೇ ಗುರುತಿಸಬಹುದಾಗಿತ್ತು. ಹೀಗಿರುವಾಗ, ಅದೇ ದಿನ ತುಂಬ ಅನಿರೀಕ್ಷಿತವಾಗಿ ಓರ್ವ ವ್ಯಕ್ತಿ ಆ ಕೆಲಸ ತಾನು ನಿರ್ವಹಿಸುವೆ ಎಂದು ಹೇಳಿಕೊಂಡು ಬಂದಾಗ ಫಾಲ್ಕನ್‌ಬ್ರಿಡ್ಜ್‌ನಿಗಾದ ಸಂತಸ ಎಷ್ಟೆಂದು ಸುಲಭವಾಗಿ ಗ್ರಹಿಸಬಹುದು. ಎಪ್ಪತ್ತು ಅಥವಾ ಅದಕ್ಕೂ ಸ್ವಲ್ಪ ಹೆಚ್ಚು ವಯಸ್ಸಿನ ಆ ವ್ಯಕ್ತಿ ಆಗಲೇ ಮುದುಕನಾಗಿದ್ದರೂ ಲವಲವಿಕೆಯಿಂದ ತುಂಬಿದ, ಗಟ್ಟಿ ನಿಲುವಿನ ಸೇನಾನಿಯಂತಿದ್ದ. ಅವನ ತಲೆಗೂದಲು ಸಂಪೂರ್ಣವಾಗಿ ಬೆಳ್ಳಗಾಗಿದ್ದವು. ಆತನ ಮುಖ ಕ್ರಿಯೋಲ್(ವೆಸ್ಟ್‌ಇಂಡೀಸ್ ಜನಾಂಗದವರಂತೆ) ಸಂತತಿಯವರಂತೆ ಕಪ್ಪಾಗಿತ್ತು. ಆದರೆ ಆತನ ನೀಲಿ ಕಣ್ಣುಗಳಿಂದ ನಿರ್ಣಯಿಸುವುದಾದರೆ, ಆತ ದಕ್ಷಿಣದ ಕಡೆಯವನಲ್ಲ ಎಂಬುದು ಸ್ಪಷ್ಟವಾಗಿತ್ತು. ಆತನ ಮುಖ ಒಂದಿಷ್ಟು ಖಿನ್ನವಾಗಿತ್ತು, ಕಾಂತಿಹೀನವಾಗಿತ್ತು ಹಾಗೂ ವಿಷಣ್ಣವಾಗಿತ್ತು. ಆದರೆ ಅದರಲ್ಲಿ ಪ್ರಾಮಾಣಿಕತೆ ತುಂಬಿಕೊಂಡಿತ್ತು. ಮೊದಲ ನೋಟಕ್ಕೇ ಆತ ಫಾಲ್ಕನ್‌ಬ್ರಿಡ್ಜ್‌ನನ್ನು ಆಕರ್ಷಿಸಿದ್ದ. ಇದೀಗ ಆತನನ್ನು ಪರೀಕ್ಷಿಸುವುದೊಂದೇ ಬಾಕಿ ಉಳಿದಿತ್ತು. ಆದ್ದರಿಂದ ಈ ಕೆಳಗಿನಂತೆ ಮಾತುಕತೆ ಶುರುವಾಯಿತು.

"ನೀನು ಎಲ್ಲಿಯವನು?"

"ನಾನು ಪೋಲೆಂಡ್ ದೇಶದವನು."

"ಇಲ್ಲಿಯವರೆಗೆ ಎಲ್ಲಿ ಕೆಲಸ ಮಾಡುತ್ತಿದ್ದೆ?"

"ಒಂದು ಸ್ಥಳದಿಂದ ಇನ್ನೊಂದು ಸ್ಥಳದಲ್ಲಿ."

"ದೀಪಗೃಹದ ಸಂಚಾಲಕನಾದವನು ಒಂದೇ ಸ್ಥಳದಲ್ಲಿದ್ದು ಕೆಲಸ ಮಾಡಬೇಕಾಗುತ್ತದೆ."

"ನನಗೆ ವಿಶ್ರಾಂತಿ ಬೇಕಾಗಿದೆ."

"ಎಲ್ಲಿಯಾದರೂ ಸೇವೆ ಸಲ್ಲಿಸಿರುವೆಯಾ? ಸರಕಾರಿ ಸೇವೆಯ ಪ್ರಮಾಣ